2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 110/2021</u>

| | | |
|---|---|---|
| ಸಾಕ್ಷಿದಾರರ ಹೆಸರು | - ವೆಂಕಟೇಶ | ಪಿಡಬ್ಲೂ - 08 |
| ತಂದೆಯ ಹೆಸರು | - ಲೇ ತಿಮ್ಮಪ್ಪ | ಸಿಡಬ್ಲೂ - 08 |
| ವಯಸ್ಸು | - 47 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ಎರೆಹಳ್ಳಿ, ಕಡೂರು ತಾ. | |

ದಿನಾಂಕಃ **17.04.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**.**

<u>ಮುಖ್ಯ ವಿಚಾರಣೆ **:** ಸರ್ಕಾರಿ ಅಭಿಯೋಜಕರಿಂದ**-**</u>

1. ಆರೋಪಿ ಗೊತ್ತಿಲ್ಲ. ಚಾಸಾ.1 ರಿಂದ 4 ಮತ್ತು ಚಾಸಾ.9 ಗೊತ್ತು.
2. ಈಗ ತೋರಿಸಿದ ನಿಪಿ.16 ರ ನೋಟೀಸು ಹಾಗೂ ನಿಪಿ.3 ರ ಮಹಜರಿನಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ.16(ಎ) ಮತ್ತು ನಿಪಿ.3(ಬಿ) ಎಂದು ಗುರುತಿಸಲಾಯಿತು.
3. ನಿಪಿ.16 ಮತ್ತು 3 ರ ದಾಖಲೆಗೆ ಮೇ 2020 ರಲ್ಲಿ ಬೀರೂರಿನ ಚಾಸಾ.2 ರವರ ಬಾಬ್ತು ಸರ್ವೆ ನಂ.173 ರಲ್ಲಿ ಸಹಿ ಮಾಡಿದ್ದೇನೆ. ಸದರಿ ಜಮೀನಿನಲ್ಲಿ ಗಲಾಟೆಯಾಗಿದೆ ಎಂದು ಚಾಸಾ.2 ರವರು ಕರೆದಿದ್ದರು. ಬೀರೂರು ಪೋಲೀಸರು ನನ್ನ ಸಹಿ ಪಡೆದರು. ಚಾಸಾ.9 ಕೂಡ ಆ ಸಮಯದಲ್ಲಿ ಹಾಜರಿದ್ದರು.
4. ಚಾಸಾ.1 ರವರು ತೋರಿಸಿದ ಸ್ಥಳದಲ್ಲಿ ಪೋಲೀಸರು ನಿಪಿ.3 ರಂತೆ ಸ್ಥಳ ಮಹಜರು ಕ್ರಮ ಜರುಗಿಸಿದರು. ಈಗ ತೋರಿಸಿದ ಮು.ಮಾ.1 ರ ಅಡಿಕೆ ದಬ್ಬೆಯನ್ನು ಅಮಾನತುಪಡಿಸಿಕೊಂಡರು. ಚಾಸಾ.1 ರವರು ಮು.ಮಾ.1 ನ್ನು ಹಾಜರುಪಡಿಸಿ ಮು.ಮಾ.1 ರಿಂದ ಆರೋಪಿ ಹಲ್ಲೆ ನಡೆಸಿದ್ದಾನೆ ಎಂದು ಹೇಳಿದ್ದರು. ಆ ಸಮಯದಲ್ಲಿ ಸಂಗ್ರಹಿಸಿದ ಭಾವಚಿತ್ರಗಳನ್ನು ಈಗ ನೋಡುತ್ತಿದ್ದು ನಿಪಿ.4 ಮತ್ತು 5 ಎಂದು

ಈಗಾಗಲೇ ಗುರುತಿಸಲಾಗಿದೆ. ಚಾಸಾ.1 ಮತ್ತು 9 ರವರು ನಿಪಿ.3 ಮಹಜರಿಗೆ ಸಹಿ ಮಾಡಿದ್ದಾರೆ.

<u>ಪಾಟೀ ಸವಾಲು:</u> ಆರೋಪಿ ಪರ ವಕೀಲರು ಗೈರು ಹಾಜರು, ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ